**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**O.S. No. 75/2025**

**ಸಾಕ್ಷಿಯನ್ನು ದಿನಾಂಕಃ 07.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಡಿ.ಸಿ. ವಕೀಲರಿಂದಃ**

ಈ ದಾವೆಯಲ್ಲಿ ನಾನು ವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನನ್ನ ದಾವೆಯ ಹಾಗು ಮಧ್ಯಂತರ ಅರ್ಜಿಗಳ ಜೊತೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

01 ಕೈ-ಬರಹದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-1** ಎಂದು, 05 ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.-2** ರಿಂದ **ನಿ.ಪಿ.-6** ಎಂದು, ಮ್ಯುಟೇಷನ್ ಆದೇಶದ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-7** ಎಂದು, 09 ಕಂದಾಯ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.-8** ರಿಂದ **ನಿ.ಪಿ.-16** ಎಂದು, 01 ಕೃಷಿ ಪಾಸ್ ಪುಸ್ತಕವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-17** ಎಂದು, ಗ್ರಾಮ ನಕಾಶೆಯ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-18** ಎಂದು, 05 ಫೋಟೋಗಳು ಹಾಗು 01 ಸಿ.ಡಿ. ಯನ್ನು ಹಾಜರುಪಡಿಸಿದ್ದು 05 ಫೋಟೋಗಳನ್ನು ಕ್ರಮವಾಗಿ **ನಿ.ಪಿ.-19 ರಿಂದ ನಿ.ಪಿ.-23** ಎಂದು ಮತ್ತು 01 ಸಿ.ಡಿ. ಯನ್ನು **ನಿ.ಪಿ.-24** ಎಂದು ಮತ್ತು ಈ ದಾವೆ ಹೂಡಿದ ಬಗ್ಗೆ ಸಾರ್ವಜನಿಕ ನೋಟೀಸ್ ನೀಡಿದ ಬಗ್ಗೆ ದಿನಾಂಕಃ **26.11.2025 ರ ವಿಜಯ ಕರ್ನಾಟಕ** ದಿನಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-25** ಎಂದು, ಪತ್ರಿಕಾ ಪ್ರಕಟಣೆಯನ್ನು **ನಿ.ಪಿ.-25(ಎ)** ಎಂದು ಗುರುತಿಸಲಾಯಿತು.

**ಪಾಟಿ ಸವಾಲು: 1 ಮತ್ತು 3 ನೇ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಿರುತ್ತಾರೆ ಆದ್ದರಿಂದ ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ಪಾಟೀ ಸವಾಲಿಗಾಗಿ ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**